ಲಕ್ಕವಳ್ಳಿ ಭದ್ರಾ ಅಣೆಕಟ್ಟಿನಲ್ಲಿ ಉದ್ಯಾನವನದ ಬಗ್ಗೆ.

೧೩೯೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲಕ್ಕವಳ್ಳಿ ಭದ್ರಾ ಅಣೆಕಟ್ಟಿನಲ್ಲಿ ಇದುವರೆಗೆ ಉದ್ಯಾನವನ್ನು ಮಾಡದೆ ಇರಲು ಕಾರಣವೇನು ?

ಆ) ಈ ಬಗ್ಗೆ ಯಾವ ಯೋಜನೆ ರೂಪಿಸಲಾಗಿದೆ ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು).—

ಅ) ನೀರಾವರಿ ಇಲಾಖೆಯಿಂದ ಇಲ್ಲಿಯವರೆಗೆ ಹಣ ಮಂಜೂರಾಗದ ಕಾರಣ ಲಕ್ಕವಳ್ಳಿ ಭದ್ರಾ ಅಣೆಕಟ್ಟು ಪ್ರದೇಶದಲ್ಲಿ ಉದ್ಯಾನವನ್ನು ಮಾಡಲು ಸಾಧ್ಯವಾಗಿಲ್ಲ.

ಆ) ಭದ್ರಾ ಜಲಾಶಯದ ಅಣೆಕಟ್ಟಿನ ಹತ್ತಿರ ಒಂದು ಉದ್ಯಾನವನ್ನು ಸ್ಥಾಪಿಸಲು ನೀರಾವರಿ ಇಲಾಖೆಯು ೩೦ ಎಕರೆ ಪ್ರದೇಶವನ್ನು ತೋಟಗಾರಿಕಾ ಇಲಾಖೆಗೆ ನೀಡಿರುತ್ತಾರೆ. ಆದರೆ ಆ ಇಲಾಖೆಯಿಂದ ಹಣ ಮಂಜೂರಾಗದ ಕಾರಣ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ರಾಜಾಜಿನಗರದ ಐದನೇ ಬ್ಲಾಕ್‌ನಲ್ಲಿ ಸರಕಾರಿ ಪ್ರಾಥಮಿಕ ಮಂತ್ತು ಮಾಧ್ಯಮಿಕ ಶಾಲೆಗಳು ಖಾಸಗಿ ಮನೆಗಳಲ್ಲಿ ನಡೆಯುತ್ತಿರುವ ಬಗ್ಗೆ.

೧೫೦೬. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜಾಜಿನಗರದ ಐದನೇ ಬ್ಲಾಕಿನಲ್ಲಿ ಸರ್ಕಾರಿ ಪ್ರಾಥಮಿಕ ಮಂತ್ತು ಮಾಧ್ಯಮಿಕ ಶಾಲೆಗಳ ನಾರ್ತ್‌ಮಿಡ್ಲ್ ಸ್ಕೂಲ್ ಎಂಬ ಹೆಸರಿನಲ್ಲಿ ಖಾಸಗಿ ಮನೆಯೊಂದರಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸುಮಾರು ೬೦ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಮಾಡಲು ಯಾವ ರೀತಿಯ ಸೌಕರ್ಯವೂ ಈ ಶಾಲೆಯಲ್ಲಿ ಇಲ್ಲ ಎಂಬುದು ತಿಳಿದಿದೆಯೆ ?

ಇ) ಐದನೇ ಬ್ಲಾಕಿನಲ್ಲೇ ಖಾಸಗಿ ಶಾಲೆಯೊಂದಕ್ಕೆ (ವಿಶ್ವಭಾರತಿ ವಿದ್ಯಾ ಸಂಸ್ಥೆ) ಸರ್ಕಾರದವರೇ ವಿಶಾಲವಾದ ಜಾಗವೊಂದನ್ನು ಕೊಟ್ಟಿದ್ದರೂ ಸಹ ಅಲ್ಲಿ ಯಾವ ವಿಧವಾದ ಶಾಲೆ ಕ್ರಮವಾಗಿ ನಡೆಯದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಈ ಜಾಗವನ್ನು ಸರ್ಕಾರವೇ ಪುನಃ ವಶಪಡಿಸಿಕೊಂಡು ನಾರ್ತ್ ಮಿಡ್ಲ್ ಮಂತ್ತು ಹೈಸ್ಕೂಲ್‌ಗಳನ್ನು ಕಟ್ಟಿಸಿ ಕೊಡಲು ಕಾರ್ಯಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಸ್ವಲ್ಪ ಮಟ್ಟಿನ ಸೌಕರ್ಯ ಇದೆ ಇನ್ನು ಹೆಚ್ಚಿನ ಸೌಕರ್ಯ ಒದಗಿಸಬೇಕಾಗಿದೆ.

ಇ) ಬಂದಿದೆ.

ಈ) ಪರಿಶೀಲಿಸಲಾಗಿತ್ತದೆ.